**ಒ.ಎಸ್.ನಂಬ್ರಃ 295/2019 ಪಿ.ಡಬ್ಲ್ಯೂ ಃ 1**

ದಿನಾಂಕಃ 12-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ ಬಿ.ಎಸ್.ಎಚ್. ವಕೀಲರಿಂದ**

ಲಚ್ಚು ಹೆಂಗ್ಸು ಎಂದರೆ ನನ್ನ ಅಜ್ಜಿ. ಪುಟ್ಟಿ ಹೆಂಗ್ಸು ನನ್ನ ತಾಯಿ. ನನ್ನ ತಾಯಿ ಈಗ ಆರೋಗ್ಯವಾಗಿ ಇರುತ್ತಾರೆ. ನನ್ನ ತಾಯಿ ಈ ಹಿಂದೆ ಸುಬ್ಬಿ ಹೆಂಗ್ಸು ಮತ್ತು ರಾಮ ಪೂಜಾರಿ ಯವರ ಜೊತೆ ಮಾಡಿಕೊಂಡ ಕರಾರು ನನಗೆ ಗೊತ್ತಿಲ್ಲ. ದಿಃ21-01-1992 ಮತ್ತು 21-05-1992 ರಂದು ಸ್ಥಿರಾಸ್ತಿ ಮಾರಾಟಕ್ಕೆ ಸಂಬಂಧಿಸಿದಂತೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಸಹಿ ಹಾಕುತ್ತಾರೆ. ಸಹಿಯನ್ನು ಅವರ ಹೆಸರು ಬರೆಯುವ ಮೂಲಕ ಹಾಕುತ್ತಾರೆ. ನಿಪಿ-2 ರಲ್ಲಿ ಇರುವ ಸಹಿ ನನ್ನ ತಾಯಿಯದ್ದು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿರುವ ಸಹಿಯನ್ನು ತನ್ನ ತಾಯಿಯದ್ದು ಅಲ್ಲ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ಹೂಡಲು ಎಲ್ಲಾ ಮಾಹಿತಿಯನ್ನು ನಾನೇ ನೀಡಿರುತ್ತೇನೆ, ನನ್ನ ತಾಯಿ ಯಾವುದೇ ಮಾಹಿತಿ ನೀಡಿರುವುದಿಲ್ಲ. ನನ್ನ ತಾಯಿಗೆ ಸದರಿ ಕರಾರು ಪತ್ರದಲ್ಲಿ ಹೇಳಿರುವ ಜಾಗದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-2 ರ ಪ್ರಕಾರ ನನ್ನ ತಾಯಿ ನನಗೆ ದಾವಾ ಆಸ್ತಿಯನ್ನು ವಿಭಾಗಪತ್ರದ ಮೂಲಕ ಕೊಟ್ಟಿರುತ್ತಾರೆ.

ಸುಬ್ಬಿ ಹೆಂಗ್ಸು ಮತ್ತು ರಾಮ ಪೂಜಾರಿಯವರು ನನ್ನ ತಾಯಿಗೆ ಕರಾರು ಪತ್ರದ ಅನುಗುಣವಾಗಿ ಸೆಂಟ್ಸು ಒಂದಕ್ಕೆ 575-00 ರೂಪ್ಯಾಗಳಂತೆ 36 ಸೆಂಟ್ಸು ಜಾಗವನ್ನು 20,700-00 ರೂಪ್ಯಾಗಳಿಗೆ ಖರೀದಿ ಕರಾರುಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಅನುಗುಣವಾಗಿ ಸುಬ್ಬಿ ಹೆಂಗ್ಸು ಹಾಗೂ ರಾಮ

ಪೂಜಾರಿಯವರಿಗೆ ಸದರಿ ಆಸ್ತಿಯನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ 21-05-1992 ರಿಂದ ಸದರಿ ಆಸ್ತಿಯು ಸುಬ್ಬಿ ಹೆಂಗ್ಸು ಮತ್ತು ಅವರ ಮಕ್ಕಳ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿಯು ನಮ್ಮ ಸ್ವಾಧೀನದಲ್ಲೇ ಇದ್ದು ನಮ್ಮ ಅಜ್ಜಿ ಕಾಲದಿಂದಲೂ ನಾವೇ ಕೃಷಿ ಮಾಡಿಕೊಂಡುಬಂದಿರುತ್ತೇವೆ ಎಂದು ನುಡಿದಿರುತ್ತಾರೆ. ದಿಃ21-01-1992 ರಿಂದ ಸುಬ್ಬಿ ಹೆಂಗ್ಸು ಮತ್ತು ಅವರ ಮಕ್ಕಳು ಸದರಿ ಆಸ್ತಿಯಲ್ಲಿ ಕೃಷಿ ಮಾಡಿಕೊಂಡು ಬರುತಿದ್ದಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರದ ಮೂಲಕ ನಿಪಿ-2 ದಾವಾ ಆಸ್ತಿ ಸ್ತಳವನ್ನು ಮಾತ್ರ ವಿಭಾಗ ಮಾಡಲಾಗಿದೆ ಎಂದರೆ ಸರಿ. ನಿಪಿ-2 ನ್ನು ಉದ್ದೇಶಪೂರ್ವಕಾಗಿ ರಚಿಸಲಾಗಿದೆ ಎಂದರೆ ಸಾಕ್ಷಿಯು ನಾವು ಅಳಿಯಸಂತಾನ ಕಟ್ಟನ್ನು ಆಚರಿಸುತ್ತಿರುವುದರಿಂದ ಇಬ್ಬರು ಹೆಣ್ಣು ಮಕ್ಕಳಿಗೂ ಸದರಿ ದಾವಾ ಆಸ್ತಿಯನ್ನು ವಿಭಾಗ ಪತ್ರದ ಮೂಲಕ ನೀಡಿರುತ್ತಾರೆ.

ನಾವು ಈ ದಾವೆಯನ್ನು ಹೂಡುವಾಗ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿರುತ್ತೇವೆ , ಪ್ರತಿವಾದಿಗಳು ನಮ್ಮ ವಿರುದ್ಧ ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿದಾದರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ಕೇಳಿರುವ ತಾತ್ಕಾಲಿಕ ನಿರ್ಬಂಧಕಾಜ್ಞೆಯು ತಿರಸ್ಕೃತಗೊಂಡಿದ್ದು ಪ್ರತಿವಾದಿಗಳು ಕೇಳಿರುವ ತಾತ್ಕಾಲಿಕ ನಿರ್ಬಂಧಕಾಜ್ಞೆಯು ಪುರಸ್ಕೃತವಾಗಿದೆ ಎಂದರೆ ಸಾಕ್ಷಿಯು ಈಗ ನಮ್ಮ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಇದ್ದು ನಾವೇ ಕೃಷಿ ಮಾಡಿಕೊಂಡು ಇದ್ದೇವೆ ಎಂದು ನುಡಿದಿರುತ್ತಾರೆ. ಈ ದಾವೆಯಲ್ಲಿ ಹೇಳಿರುವಂತೆ ಪ್ರತಿವಾದಿಗಳು ಯಾವುದೇ ತೊಂದರೆಯನ್ನು ನೀಡಿಲ್ಲ ನಾವಾಗಿಯೇ ಪ್ರತಿವಾದಿಗಳ ವಿರುದ್ಧ ಕಾರಣಗಳನ್ನು ಸೃಷ್ಟಿಸಿಕೊಂಡು ಸದರಿ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ವಿರುದ್ಧ ಪ್ರತಿವಾದಿಗಳು ಕ್ರಿಮಿನಲ್ ದೂರನ್ನು ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದಾರೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನಾವು ಪ್ರತಿವಾದಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ ನಂತರ ಅವರು ನಮ್ಮ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ.

ನನ್ನ ತಾಯಿ ಪುಟ್ಟಿ ಹೆಂಗ್ಸು ಪ್ರತಿವಾದಿಯವರ ತಾಯಿ ಸುಬ್ಬಿ ಹೆಂಗ್ಸು ರವರಿಗೆ ಖರೀದಿ ಕರಾರುಪತ್ರ ಮಾಡಿಕೊಟ್ಟು ಕ್ರಯಪತ್ರ ಮಾಡಿಕೊಡದೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪದೆಪದೇ ಖರೀದಿಪತ್ರ ಮಾಡಿಕೊಡುವಂತೆ ನನ್ನ ತಾಯಿಯನ್ನು ಒತ್ತಾಯಿಸಿದರು ಎಂದರೆ ಸರಿಯಲ್ಲ. 2018 ರಲ್ಲಿ ನಮ್ಮ ತಾಯಿ ಸದರಿ ದಾವಾ ಸ್ತಳಕ್ಕೆ ಸಂಬಂಧಿಸಿದಂತೆ ವಿಭಾಗಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ . ವಿಭಾಗಪತ್ರ ಆದ ನಂತರ ಪಹಣಿ ಪತ್ರಿಕೆ ನಮ್ಮ ಹೆಸರಿಗೆ ಆಗಲು ಕಾನೂನು ಪ್ರಕಾರ ತಗಲುವ ದಿನವಷ್ಟೇ ಆಗಿದೆ. ನಮ್ಮ ತಾಯಿ ಉದ್ದೇಶಪೂರ್ವಕಾಗಿ ದಾಖಲೆಯನ್ನು ನಮ್ಮ ಹೆಸರಿಗೆ ವರ್ಗಾಯಿಸಿ ನಮ್ಮ ಮೂಲಕ ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ತಕರಾರು ನಮ್ಮ ಹೆಸರಿಗೆ ದಾಖಲೆಗಳು ವರ್ಗಾವಣೆಯಾದ ನಂತರ ಆರಂಭವಾಯಿತು ಎಂದರೆ ಸರಿಯಲ್ಲ್ಮ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನ್ಯಾಯಾಲಯದ ಮಂದೆ ಹಾಜರುಪಡಿಸಿರುವ ನಿಪಿ-8 ಫೋಟೋಗಳು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಪ್ರತಿವಾದಿಗಳು ಸ್ವಾಧೀನ ಪಡೆದುಕೊಂಡು ಕೃಷಿಯನ್ನು ನಡೆಸಿಕೊಂಡು ಬರುತಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಕೂಡಾ ಪ್ರತಿವಾದಿಗಳು ಮಾಡಿರುವ ಭತ್ತದ ಕೃಷಿ ದಾವಾ ಸ್ತಳದಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಿದ್ದು ನಮ್ಮ ಮನೆ ಬ್ರಹ್ಮಾವರ ತಾಲೂಕಿನ ಗಿಳಿಯಾರಿನಲ್ಲಿ ಮತ್ತು

ಹೆಮ್ಮಾಡಿಯಲ್ಲಿ ಇದೆ. ಹೆಮ್ಮಾಡಿಯಲ್ಲಿ ನಮಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆ ದಾವಾ ಆಸ್ತಿಯ ಹತ್ತಿರ ಇದೆ ಎಂದರೆ ಸರಿ . ನಮ್ಮ ಮನೆ ರಸ್ತೆಯ ಸಮೀಪ ಇದ್ದು ಪ್ರತಿವಾದಿಗಳ ಮನೆ ಗದ್ದೆಯ ಹತ್ತಿರ ಇರುತ್ತದೆ ನಮ್ಮ ಮನೆಗೂ ಅವರ ಮನೆಗೂ ಜಾಸ್ತಿ ಅಂತರ ಇರುವುದಿಲ್ಲ. ಕರಾರುಪತ್ರದ ವಿಷಯ ನಮ್ಮ ತಾಯಿ ನಮಗೆ ಹೇಳಿಲ್ಲ ಎಂದರೆ ನಮ್ಮ ತಾಯಿಗೆ ಕರಾರು ಪತ್ರದ ವಿಷಯ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ತಾಯಿ ಪ್ರತಿವಾದಿಗಳಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟು ನ್ಯಾಯಾಲಯದಲ್ಲಿ ಸುಳ್ಳು ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿದ ವ್ಯಾಜ್ಯ ಕಾರಣವು ದಾವೆಗಾಗಿ ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ. ನಾವೇ ಪ್ರತಿವಾದಿಗಳಿಗೆ ತೊಂದರೆ ನೀಡಿ ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಸುಳ್ಳು ಸಾಧನೆ ಮಾಡುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ಓ.ಹೇ.ಕೇ.ಸ.ಇದೆ                    ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**